ವಿಂಡೋ ಸೀಟು. ಹುಡುಕುವುದರೊಳಗೇ ಕಂಡ ಸೀಟಿನಲ್ಲಿ ಕೂತು ಎದುರಿಗಿದ್ದ ಮೆಶ್ ಪಾಕೆಟ್‌ನಲ್ಲಿ ನನ್ನ ಕೈಲಿದ್ದ ನೀರಿನ ಬಾಟಲ್ ಸಿಗಿಸಿ ನಿರಾಳವಾದ ಉಸಿರು ತೆಗೆದು ಪಕ್ಕದ ಖಾಲಿ ಸೀಟಿನತ್ತ ಕಣ್ಣಾಡಿಸುವುದರಲ್ಲಿ ಒಬ್ಬ ಮಧ್ಯವಯಸ್ಸಿನ ಧಡೂತಿ ಹೆಂಗಸು 'ಇಲ್ಲಿದೆ ಕಣೋ...' ಎನ್ನುತ್ತಾ ನನ್ನ ಪಕ್ಕ ಆಸೀನನಾದಳು. 'ಯಾರ್‍ರೀ... ಇಳೀರಿ ಬೇಗ' ಎಂಬ ಡ್ರೈವರ್‌ನ ಕರ್ಕಶ ಕೂಗಿಗೆ ಬೆಚ್ಚಿಬಿದ್ದ 25ರಿಂದ 30ರೊಳಗಿನ ಆ ಯುವಕ ಈ ಹೆಂಗಸಿಗೆ ಕೈ ಮಾಡುತ್ತಾ ಇಳಿದು ಜನಸಂದಣಿಯಲ್ಲಿ ಕರಗಿಹೋದ. ನನ್ನತ್ತ ತಿರುಗಿದ ಆಕೆ ಒಂದು ಆತ್ಮೀಯ ನಗೆ ನಕ್ಕು ತನ್ನ ಚೀಲವನ್ನೆಲ್ಲ ಸರಿಯಿದೆಯೋ ಇಲ್ಲವೋ ಎಂಬಂತೆ ಪರೀಕ್ಷಿಸಿದಳು. ನಾನು ಹೌದೋ ಅಲ್ಲವೋ ಎಂಬತೆ ಕಿರುನಗೆ ಹೊರಸೂಸಿ ಸುಮ್ಮನಾದೆ. ಅಂತೂ ತನ್ನ ಭಾರವಾದ ಸೂಟ್ ಕೇಸನ್ನು ಸೀಟಿನ ಕೆಳಗೆ ತಳ್ಳುವುದರಲ್ಲಿ ಯಶಸ್ವಿಯಾದ ಆಕೆ ಲಗೇಜನ್ನೆಲ್ಲಾ ಸಂಭಾಳಿಸಿದ ಗೆಲುವಿನಲ್ಲಿ ನೆಮ್ಮದಿಯ ಸ್ಟೇಟಸ್ ತಲುಪುತ್ತಿದ್ದಂತೆ ಮತ್ತಷ್ಟು ಹಿಂದೆ ಸರಿದು ಸೀಟಿಗೆ ಬೆನ್ನು ತಾಗಿಸಿ ಒರಗುತ್ತಾ 'ಮಂಗಳೂರಿಗೇನಮ್ಮಾ...?' ಎನ್ನುತ್ತಾ ಅಚ್ಚ ಬೆಂಗಳೂರು ಕನ್ನಡದಲ್ಲಿ ಮಾತಿಗೆ ತೊಡಗಿದರು. ಅವರ ಮಾತು ಕೇಳುತ್ತಿದ್ದಂತೆ ನನಗೇ ಅರಿವಿಲ್ಲದೆ ಇದ್ದೊಂದು ಆತಂಕ ದೂರವಾಗಿ ಸಂತಸದ ಗೆರೆಯೊಂದು ಮೂಡಿತ್ತು ಮನಸ್ಸಿನಲ್ಲಿ.

ನನಗೋ ಮಂಗಳೂರು ಭಾಷೆ ಬಾರದು, ಹೋಗಲಿ ಕೇಳಲಾದರೂ ಹಿಡಿಸುತ್ತದೆಯೋ ಎಂದರೆ ಅದೂ ಇಲ್ಲ. ಮಾತಿಗೆ ಮೊದಲು 'ಉಂಟು ಉಂಟು' ಎಂದು ತಡೆದು ತಡೆದು ಎಲ್ಲ ಅಕ್ಷರಗಳ ಕುತ್ತಿಗೆಗೂ ಬಿದ್ದ ಕುಣಿಕೆಯನ್ನು ಸಡಿಲಿಸಿ ಮಾತಾಡುವ ಆ ಪರಿ ನನಗೆ ಇಷ್ಟವಾಗುವುದೇ ಇಲ್ಲ. ಅದೇಕೋ ಏನೋ, ನಮಗೆ ಇಷ್ಟವಾಗದ ಭಾಷೆಯವರೇ ನಮ್ಮ ಹತ್ತಿರ ಕೊರೆಯುವುದೂ ಜಾಸ್ತಿ ಅಂತ ನನ್ನ ನಂಬಿಕೆ. 'ಸದ್ಯ!' ಈ ಪಕ್ಕಕ್ಕೆ ಕೂತವಳು ಇನ್ನು ಎಂಟು ತಾಸು ನನ್ನನ್ನು ಮಂಗಳೂರು ಭಾಷೆಯಲ್ಲಿ ಹುರಿದು ಮುಕ್ಕುವುದಿಲ್ಲವಲ್ಲ ಎಂಬ ಸಂತೋಷದಿಂದ ಯಾವಾಗಲೂ ಸುಮ್ಮನಿರಲೇ ಬಯಸುವ ನಾನು ಆಕೆಯೊಂದಿಗೆ ಮಾತಿಗಿಳಿಯಲು ಹಸಿರು ನಿಶಾನೆ ತೋರಿಸಿದೆ. ಬಸ್ಸು ಇನ್ನೂ ಮೆಜೆಸ್ಟಿಕ್ ದಾಟಿ ತೆವಳುತ್ತಾ, ಕುಂಟುತ್ತಾ ರಸ್ತೆಯಲ್ಲಿ ಜಾಗ ಮಾಡಿಕೊಳ್ಳುತ್ತಾ ಮುಂದೋಡುವ ಪ್ರಯತ್ನದಲ್ಲಿತ್ತು. 'ಆಂಟಿ'ಯೊಂದಿಗೆ ನನ್ನ ಸ್ನೇಹ ಸಂಬಂಧ ಅಷ್ಟರಲ್ಲೇ ಚಿಗುರೊಡೆದುಬಿಟ್ಟಿತ್ತು.

***



'ಅಷ್ಟು ದೊಡ್ಡ ಬ್ಯಾಗು, ಸೂಟ್‌ಕೇಸು... ನೀವೆಲ್ಲೋ ಫಾರಿನ್‌ನಿಂದ ಬರ್ತಿರೋ ಹಾಗಿದೆ ಅನ್ನಿಸುತ್ತೆ' ಅಂತ ಎಂದೂ ಬೇರೆಯವರ ವಿಷಯದಲ್ಲಿ ಮೂಗು ತೂರಿಸದ ನಾನು ಕೇಳಬೇಕೆಂದುಕೊಂಡಿದ್ದೆ. ಅಷ್ಟರಲ್ಲೇ ಆ ಆಂಟಿಯೇ ಹೇಳಿದರು, 'ಅಯ್ಯೋ, ನನ್ನ ಮಗಳಿಗೆ ಬಾಣಂತನ ಮಾಡಿ ಅಮೆರಿಕಾದಿಂದ ಬಂದೆ ಕಣಮ್ಮ. ಈ ಹುಡುಗ ನನ್ನ ಕಳಿಸಲು ಬಂದಿದ್ನಲ್ಲ, ಅವನು ನನ್ನ ಮಗಳ ಮೈದುನ ಕಣಮ್ಮ. ಬೆಂಗಳೂರಲ್ಲೇ ಆಕೆಯ ಅತ್ತೆ, ಮಾವ ಇರೋದು. ನಮ್ಮದು ಮೈಸೂರಮ್ಮ. ನಮ್ಮೆಜಮಾನ್ರು ಎಂ.ಆರ್.ಪಿ.ಎಲ್‌ನಲ್ಲಿ ಇಂಜಿನಿಯರ್ ಕಣಮ್ಮ...' ನಾನು ಕೇಳಬೇಕೆಂದುಕೊಂಡಿದ್ದ ಪ್ರಶ್ನೆಗೆ ಬೋನಸ್ ಅನ್ನೂ ಸೇರಿಸಿ ಒಂದೇ ಸಮ ತಮ್ಮ ಪ್ರವರ ಒಪ್ಪಿಸಿಬಿಟ್ಟರು ಆಕೆ. ಒಬ್ಬಳೇ ಮಂಗಳೂರುವರೆಗೂ ದಾರಿಯಲ್ಲಿ ಹೇಗಪ್ಪ ಹೊತ್ತುಕಳೆಯುವುದು ಎಂಬ ನನ್ನ ಮನಸ್ಸಿನ ದುಗುಡವನ್ನೆಲ್ಲ ಗುಡಿಸಿ ಹಾಕಿಬಿಟ್ಟಿದ್ದರು ಮಾತಿನ ಮಲ್ಲಿ ಆಂಟಿ.

'ನೋಡಮ್ಮ, ಇನ್ನು ಸ್ವಲ್ಪ ಹೊತ್ತಲ್ಲಿ ಕಾಮತ್ ಹೋಟೆಲ್ ಬರುತ್ತೆ. ಕಾಫಿ, ತಿಂಡಿ ತಿಂದುಬಿಡೋಣ ಅಲ್ವಾ? ಹಾಗೇ ಬಾತ್ ರೂಂಗೂ ಹೋಗಿ ಬಂದರಾಯಿತು. ಅಲ್ವಾಮ್ಮಾ?' ಆಂಟಿಯನ್ನು ಒಮ್ಮೆಲೇ ಆತ್ಮೀಯಳೋ ಎಂಬಂತೆ ನೋಡಿದೆ. ಒಂಟಿ ಹೆಣ್ಮಕ್ಕಳು ದೂರ ಪ್ರಯಾಣ ಮಾಡುವಾಗ ಈ ದೇಶದಲ್ಲಿ ಎಂತೆಂಥ ಸಮಸ್ಯೆ ಎದುರಾಗುತ್ತದೆ. ಅದರಲ್ಲೂ ಈ ಟಾಯ್ಲೆಟ್ ಸಮಸ್ಯೆ ಎಂದೆಂದಿಗೂ ನಂಬರ್ ಒನ್ ಪಟ್ಟದಲ್ಲೇ ಇದೆ. (ಶೌಚಾಲಯ ಸಮಸ್ಯೆ ಬಗ್ಗೆ ಮಾತಾಡಲು ಈ ದೇಶದ ಪ್ರಧಾನಿ ತಲೆ ಕೆಡಿಸಿಕೊಂಡಿರದ ಕಾಲವದು). ಬಸ್ಸಿಳಿದು ಟಾಯ್ಲೆಟ್‌ಗೆ ಹೋಗಿ ಬರುವುದರೊಳಗೆ ಲಗೇಜ್ ಕಳುವಾದರೆ ಎಂಬ ಚಿಂತೆ ಒಂದಾದರೆ, ಟಾಯ್ಲೆಟ್ ಎಂಬ ನರಕದಲ್ಲಿ ತಲೆತಿರುಗಿ ಬಿದ್ದರೆ ಎಂಬುದಿನ್ನೊಂದು ಚಿಂತೆ, ಟಾಯ್ಲೆಟ್ ಇರುತ್ತೋ ಇಲ್ಲವೋ ಎಂಬುದು ಮತ್ತೂ ದೊಡ್ಡ ಪ್ರಶ್ನೆ. ಹೀಗೆಲ್ಲ ಒಳಗೊಳಗೇ ಕೊರಗುತ್ತಾ, ನೀರು ಕುಡಿಯಲೂ ಹೆದರುತ್ತಾ ಮಂಗಳೂರಿಗೆ ಹೋಗಿ ತಲುಪುವಷ್ಟರಲ್ಲಿ ನನ್ನ ಕಥೆ ಏನಾಗಿರುತ್ತೋ ಎಂಬ ನನ್ನ ಸಮಸ್ಯೆಯನ್ನು ಈ ಅಪರಿಚಿತ ಆಂಟಿ ಚಿಟಿಕೆ ಹೊಡೆದಂತೆ ನಿವಾರಿಸಿಬಿಟ್ಟಿದ್ದರು.

'ನೋಡಪ್ಪಾ, ನಾವು ಕಾಮತ್‌ನಿಂದ ಬರೋವರೆಗೂ ನಮ್ಮಿಬ್ಬರ ಲಗೇಜನ್ನೂ ನೀನೇ ನೋಡ್ಕೋಬೇಕು ಕಣಪ್ಪ, ಹುಶಾರು...' ಎನ್ನುತ್ತಾ ನಾವು ಇಳಿಯುವಾಗ ಕಂಡಕ್ಟರ್‌ಗೆ ಆಂಟಿ ಆದೇಶ ಕೊಟ್ಟರೆ ಆ ಸಿಡುಕು ಮುಖದವನೂ ಕೋಲೇ ಬಸವನಂತೆ 'ಹೂಂ'ಗುಟ್ಟಿದಾಗ ನನಗಾಶ್ಚರ್ಯವಾಯಿತು. ಆಂಟಿಯ ಮಾಯಾಜಾಲಕ್ಕೆ ಬೀಳದಿರಲು ಯಾರಿಗೂ ಸಾಧ್ಯವಿಲ್ಲವೆಂದೆನಿಸಿತು. ಒಟ್ಟಿನಲ್ಲಿ ಈಕೆಯೊಬ್ಬ 'ಇಂಟರೆಸ್ಟಿಂಗ್ ಕ್ಯಾರೆಕ್ಟರ್' ಎಂಬುದು ನಿಚ್ಚಳವಾಯ್ತು ನನಗೆ. ಕಾಮತ್‌ನಲ್ಲಿ ನಾವಿಬ್ಬರು ಮಸಾಲೆ ದೋಸೆ ತಿಂದು, ಕಾಫಿ ಕುಡಿಯುವಷ್ಟರಲ್ಲಿ ನಮ್ಮಿಬ್ಬರ ಪರಿಚಯ ಈಗೊಂದು ಗಂಟೆಯ ಹಿಂದೆಯಷ್ಟೇ ಬಸ್ಸಿನಲ್ಲಿ ಆಗಿತ್ತೆಂದು ಅನಿಸಲೇ ಇಲ್ಲ. ನಮ್ಮ ಸ್ನೇಹ ನಾವು ಕುಡಿದ ಕಾಫಿಯ ಪರಿಮಳದಷ್ಟೇ, ದೋಸೆಯ ರುಚಿಯಷ್ಟೇ ಚಿರಪರಿಚಿತವೇನೋ ಅನಿಸಿ ನನಗೆ ಒಂಥರಾ ಖುಷಿಯಾಯಿತು. ಇಲ್ಲಿಯವರೆಗೂ ನನ್ನ ಆತ್ಮೀಯ ವಲಯಕ್ಕೆ ನನ್ನ ಮನೆಯವರ ಹೊರತಾಗಿ ಇನ್ಯಾರೂ ಬಂದಿರಲೇ ಇಲ್ಲದ್ದರಿಂದ ಹಾಗನಿಸಿರಬೇಕು. ಕಾಫಿ–ತಿಂಡಿಯ ದುಡ್ಡನ್ನೂ ತಾನೇ ಕೊಡಲು ಮುಂದಾದ ಆಂಟಿಯ ಕೈ ಹಿಡಿದು 'ನನ್ನ ಪಾಲಿನ ದುಡ್ಡನ್ನಾದರೂ ತೆಗೆದುಕೊಳ್ಳಿ' ಎಂದು ಒತ್ತಾಯದಿಂದ ತುರುಕಬೇಕಾಯಿತು ನಾನು. ಟಾಯ್ಲೆಟ್ಟಿಗೂ ಭೇಟಿಕೊಟ್ಟು ಇಬ್ಬರೂ ಮಾತಾಡುತ್ತಾ ಮತ್ತೆ ಬಸ್ಸೇರಿದೆವು.

ಒಂದು ಕಡೆ ಬಿಸಿಲೇರುತ್ತಿದ್ದರೆ, ನಮ್ಮ ಬಸ್ಸು ಬಿರುಸಾಗಿ ಸಾಗಿ ಇಷ್ಟಿಷ್ಟೇ ಪ್ರಮಾಣದಲ್ಲಿ ಕೆಳಗಿಳಿಯುತ್ತಾ ಸಮುದ್ರ ಮಟ್ಟ ಮುಟ್ಟುವ ಆತುರದಲ್ಲಿತ್ತು. ಆ ವೇಗಕ್ಕೆ ಸರಿಸಾಟಿಯಾಗಿ ಆಂಟಿ ತನ್ನ ಜೀವನ ವೃತ್ತಾಂತವನ್ನೆಲ್ಲ ಮಂಗಳೂರು ಮುಟ್ಟುವಷ್ಟರಲ್ಲಿ ನನಗೆ ಹೇಳಿ ಮುಗಿಸುವ ಪಣ ತೊಟ್ಟಂತೆ ಮಾತಿಗಿಳಿದಿದ್ದರು.

***

ನನ್ನ ಮಗಳು ರಮ್ಯ, ಅವಳ ಗಂಡ ರಮೇಶ ಒಳ್ಳೆ ಫ್ರೆಂಡ್ಸ್ ಥರ ಇದಾರೆ ಕಣಮ್ಮ. ನನ್ ಮಗಳು ಮೈಸೂರಲ್ಲಿ ಅವರ ತಾತನ ಮನೇಲಿದ್ಕೊಂಡು ಬಿ.ಇ. ಮಾಡಿದ್ಲು. ಓದು ಮುಗೀತಿದ್ದಂಗೆ ಬೆಂಗಳೂರಿನಿಂದ ರಮೇಶನ ಅಪ್ಪ–ಅಮ್ಮ ನಮ್ಮ ರಮ್ಯಾನ್ನ ಕೇಳಿದ್ರಮ್ಮ ಅವರ ಮಗನಿಗೆ. ಹುಡುಗ ನಾವು ನೋಡಿ ಗೊತ್ತಿರುವವನೆ. ದೂರದ ಸಂಬಂಧ ಬೇರೆ. ಅಮೇರಿಕಾದಲ್ಲಿ ಸಾಫ್ಟ್‌ವೇರ್ ಇಂಜಿನಿಯರ್, ಕೈ ತುಂಬಾ ದುಡೀತಾನೆ, ನೋಡೋಕೂ ಚೆನ್ನಾಗಿದಾನೆ... ಇನ್ನೇನಮ್ಮ ಬೇಕು? ಸರಿ ಅಂತ ನಾವೂ ಚಿಕ್ ವಯಸ್ಗೇ ನಮ್ಮ ರಮ್ಯಾನ್ನ ಅವನಿಗೆ ಕೊಟ್ಟು ಮದುವೆ ಮಾಡಿ ಬಿಟ್ವಿ...

ಗಕ್ಕನೆ ಬಿದ್ದ ಬ್ರೇಕ್ ನಮ್ಮೆಲ್ಲರನ್ನು ಒಮ್ಮೆಗೇ ಮುಂದಿನ ಸೀಟಿನವರೆಗೆ ಎತ್ತಿ ಬಿಸಾಡಿತ್ತು. ಆಂಟಿಯ ಮಾಯಾಲೋಕದಿಂದ ಎಚ್ಚೆತ್ತು ಹೊರನೋಡಿದರೆ ಬಿರುಬಿಸಿಲಿನಲ್ಲಿ ಬಸ್ಸಿಗೆ ಅಡ್ಡಲಾಗಿ ಎಮ್ಮೆಯೊಂದು ಬಾಲ ಅಲ್ಲಾಡಿಸಿಕೊಂಡು ಹೋಗುತ್ತಿತ್ತು. ಬಿಸಿಲು ಕಿಟಕಿಯಿಂದ ನನ್ನ ಮುಖಕ್ಕೇ ಬಿದ್ದು ಕೆನ್ನೆ ಚುರ್ರೆನ್ನತೊಡಗಿದ್ದು ಈಗಷ್ಟೇ ಅರಿವಾಯಿತು ನನಗೆ. ಕಿಟಕಿಯ ಪರದೆ ಎಳೆದು ಹೊರಗಿನ ನೋಟಕ್ಕೆ ತೆರೆ ಬೀಳಿಸಿದೆ.

'ಥೂ, ಏನಪ್ಪಾ ಇವನು? ಇಷ್ಟೊಂದು ಜೋರಾಗಿ ಹೋಗ್ತಿದ್ದಾನೆ, ಸ್ವಲ್ಪ ಹುಷಾರಾಗಿ ಹೋಗ್ಬಾರ್ದಾ? ನಮ್ಮ ರಮೇಶ, ರಮ್ಯ, ನನ್ನ ಮಗ ರವಿ ಎಷ್ಟೊಂದು ಕೇರ್‌ಫುಲ್ಲಾಗಿ ಗಾಡಿ ಓಡಿಸ್ತಾರೆ ಗೊತ್ತಾಮ್ಮಾ?' — ಆಂಟಿಯ ಆಕ್ಷೇಪಣೆಗೆ ನನ್ನ ತಲೆಯೂ ಅಲ್ಲಾಡಿತು. ಆದರೆ ಅಮೆರಿಕಾದಲ್ಲಿ ಹೀಗೆ